ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 14/9/20

ಕನ್ನಡಪ್ರಭ
ಸಂಪಾದಕೀಯ

# ಕಷ್ಟ ಕಾಲದಲ್ಲಿ ಸಂಸತ್ ಕಲಾಪ: ಗದ್ದಲ ಬೇಡ, ಫಲಪ್ರದವಾಗಲಿ

ಕೊರೋನಾ ಮಹಾಮಾರಿಯ ಈ ಸಂಕಷ್ಟದ ಕಾಲದಲ್ಲಿ ಸಂಸತ್ತಿನ ಉಭಯ ಸದನಗಳ ಮಳೆಗಾಲದ ಅಧಿವೇಶನ ಇಂದಿನಿಂದ ಆರಂಭವಾಗಿದೆ. ದೇಶವನ್ನು ಕಾಡುತ್ತಿರುವ ಹಲವು ಜ್ವಲಂತ ಸಮಸ್ಯೆಗಳನ್ನು ಜನಪ್ರತಿನಿಧಿಗಳು ಚರ್ಚಿಸುವುದಕ್ಕೆ, ತಮ್ಮ ಸಲಹೆ ಸೂಚನೆಗಳನ್ನು ನೀಡುವುದಕ್ಕೆ, ಸರ್ಕಾರಕ್ಕೆ ಸೂಕ್ತ ಮಾರ್ಗದರ್ಶನ ನೀಡುವುದಕ್ಕೆ, ಅಗತ್ಯ ಕಾನೂನುಗಳನ್ನು ಮಾಡುವುದಕ್ಕೆ, ಕಳೆದ ಅಧಿವೇಶನದ ಈಚೆಗೆ ತುರ್ತು ಸಂದರ್ಭಗಳಲ್ಲಿ ಹೊರಡಿಸಲಾದ ಸುಗ್ರೀವಾಜ್ಞೆಗಳಿಗೆ ಸಂಸತ್ತಿನ ಅನುಮೋದನೆಯನ್ನು ಪಡೆದುಕೊಳ್ಳುವುದಕ್ಕೆ ಈ ಅಧಿವೇಶನ ಅವಕಾಶ ನೀಡುತ್ತದೆ. ಸುಗ್ರೀವಾಜ್ಞೆಗಳನ್ನು ಕಾನೂನು ಮಾಡುವುದಕ್ಕಾಗಿ 11 ಮಸೂದೆಗಳನ್ನು ಸರ್ಕಾರ ಸಿದ್ಧಪಡಿಸಿಕೊಂಡಿದೆ. ಅವುಗಳ ಮಂಡನೆಯೂ ನಡೆಯುತ್ತದೆ. ಕೃಷಿ ಕ್ಷೇತ್ರದಲ್ಲಿ ಭಾರೀ ಬದಲಾವಣೆ ತರುವ ಮೂರು ಸುಗ್ರೀವಾಜ್ಞೆಗಳೂ ಸೇರಿ ಒಟ್ಟು 33 ಮಸೂದೆಗಳು ಮಂಡನೆಯಾಗಲಿವೆ. ಜನಕಲ್ಯಾಣದ ದೃಷ್ಟಿಯಿಂದ ಆತ್ಮನಿರ್ಭರ ಭಾರತಕ್ಕೆ ಪೂರಕವಾಗುವ ಮಸೂದೆಗಳು ಇವು ಎಂಬುದು ಸರ್ಕಾರದ ನಂಬಿಕೆಯಾಗಿದೆ. ಇವುಗಳ ಮೇಲೆ ಸಕಾರಾತ್ಮಕವಾಗಿ ಸಂಸತ್ತಿನಲ್ಲಿ ಚರ್ಚೆ ನಡೆಸುವುದು ಎಲ್ಲ ಪಕ್ಷಗಳ ಸದಸ್ಯರ ಹೊಣೆ.

ಈ ಸಲದ ಅಧಿವೇಶನ ತುಂಬ ವಿಶಿಷ್ಟವಾದುದು. ಕೇವಲ ಹದಿನೆಂಟು ದಿನಗಳು ಮಾತ್ರ ಅಧಿವೇಶನ ನಡೆಯಲಿದೆ. ವಿರೋಧಕ್ಕಾಗಿ ವಿರೋಧ ಮಾಡಿದರೆ ಅಮೂಲ್ಯ ಸಮಯ ವ್ಯರ್ಥವಾಗಿಹೋಗುತ್ತದೆ. ಚರ್ಚೆ ನಡೆಯದೆ ಹೋದರೆ ಮಸೂದೆಗಳಲ್ಲಿಯ ಲೋಪದೋಷಗಳು ಬೆಳಕಿಗೆ ಬರುವುದೇ ಇಲ್ಲ, ಈ ಹಿಂದಿನ ಅನುಭವಗಳ ಮೂಲಕ ಹೇಳಬೇಕೆಂದರೆ ಗದ್ದಲದ ಕಾರಣದಿಂದಾಗಿಯೇ ಸಂಸತ್ ಕಲಾಪದ ಬಹುಭಾಗ ವ್ಯರ್ಥವಾಗಿ ಹೋಗುತ್ತದೆ. ಹೀಗಾದಾಗ ಅಧಿವೇಶನದ ಕೊನೆಯ ದಿನಗಳಲ್ಲಿ ಪ್ರತಿಪಕ್ಷಗಳ ಸಭಾತ್ಯಾಗದ ಗೈರುಹಾಜರಿಯಲ್ಲಿ ಚರ್ಚೆಯಿಲ್ಲದೆಯೇ ಮಸೂದೆಗಳನ್ನು ಅಂಗೀಕರಿಸಲಾಗುತ್ತದೆ. ಇನ್ನು, ಈ ಬಾರಿ ಪ್ರಶ್ನೋತ್ತರ ಅವಧಿಯನ್ನು ಕೈಬಿಡುವ ಕುರಿತು ಸರ್ಕಾರ ಆಲೋಚಿಸಿತ್ತು. ಆದರೆ ಇದಕ್ಕೆ ಪ್ರತಿಪಕ್ಷಗಳ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಅದಕ್ಕೆ ಅವಕಾಶ ಕಲ್ಪಿಸಲಾಗಿದೆ. ನಿಜ, ಈ ಹಿಂದಿನ ಅಧಿವೇಶನಗಳನ್ನು ಗಮನಿಸಿದಾಗ ಪ್ರಶ್ನೋತ್ತರ ಅವಧಿಯನ್ನು ಸದಸ್ಯರು ಎಷ್ಟೊಂದು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಸದನದ ಕಲಾಪವನ್ನು ಹಾಳುಮಾಡುವುದು ಯುಪಿಎ ಮತ್ತು ಎನ್‌ಡಿಎ ಎರಡರ ಅವಧಿಯಲ್ಲೂ ಆಗಿವೆ. ಸದನದ ಕಲಾಪ ನಡೆಯದಂತೆ ಮಾಡಿದ್ದೇ ಸಾಧನೆ ಎನ್ನುವುದು ಪ್ರತಿಪಕ್ಷಗಳ ಹೆಗ್ಗಳಿಕೆ ಆಗದಿರಲಿ ಎನ್ನುವುದು ಆಶಯ.

**ದೇಶದ ಕೃಷಿ ಕ್ಷೇತ್ರದ ಭವಿಷ್ಯವನ್ನೇ ಬದಲಿಸಬಲ್ಲ ಮಹತ್ವದ ಮೂರು ಸುಗ್ರೀವಾಜ್ಞೆಗಳೂ ಸೇರಿದಂತೆ 33 ಮಸೂದೆಗಳನ್ನು ಸಂಸದರು ಗಂಭೀರವಾಗಿ ಚರ್ಚಿಸಬೇಕಿದೆ.**

ಈ ಬಾರಿ ಪ್ರತಿಪಕ್ಷಗಳಿಗೆ ಚರ್ಚಿಸುವುದಕ್ಕೆ ಹಲವು ವಿಚಾರಗಳು ಇವೆ. ಕೊರೋನಾ ಪಿಡುಗನ್ನು ಸರ್ಕಾರ ಸರಿಯಾಗಿ ನಿಭಾಯಿಸಿದೆಯೇ ಇಲ್ಲವೆ, ಯಾವ ಯಾವ ಉಪಯುಕ್ತ ಕ್ರಮಗಳನ್ನು ಕೈಗೊಳ್ಳಬಹುದಾಗಿತ್ತು ಎಂಬುದನ್ನು ವಿವರಿಸುವ ಮೂಲಕ ಸರ್ಕಾರಕ್ಕೆ ಮಾರ್ಗದರ್ಶನ ಮಾಡಬಹುದು. ಕೊರೋನಾ ಕಾರಣದಿಂದಾಗಿಯೇ ದೇಶದ ಅರ್ಥವ್ಯವಸ್ಥೆ ಹಳಿತಪ್ಪಿ ಹೋಗಿದೆ. ಜಿಡಿಪಿ ಪಾತಾಳ ಕಂಡಿದೆ. ಇದನ್ನು ಮೇಲೆತ್ತುವ ಬಗೆಯ ಕುರಿತು ಅರ್ಥಪೂರ್ಣ ಚರ್ಚೆ ಅಗತ್ಯವಿದೆ. ಪ್ರತಿಪಕ್ಷಗಳಲ್ಲಿಯೂ ಪ್ರತಿಭಾವಂತರಾದ ಅರ್ಥಶಾಸ್ತ್ರಜ್ಞರು ಇದ್ದಾರೆ. ಅವರ ಲಾಭ ಸರ್ಕಾರಕ್ಕೆ ಸಿಗುವಂತಾಗಲಿ. ರಾಜ್ಯ ಸರ್ಕಾರಗಳ ಪ್ರಮುಖ ಕಾಳಜಿ ಅವುಗಳ ಜಿಎಸ್‌ಟಿ ಪಾಲು ದೊರೆಯದೆ ಇರುವುದು. ಎನ್‌ಡಿಎ ಅಧಿಕಾರದಲ್ಲಿರುವ ರಾಜ್ಯಗಳು ಸುಮ್ಮನಿದ್ದರೂ ಪ್ರತಿಪಕ್ಷದವರು ಅಧಿಕಾರದಲ್ಲಿರುವ ರಾಜ್ಯಗಳು ಕೈಕೈ ಹಿಸುಕಿಕೊಳ್ಳುತ್ತಿವೆ. ಅವುಗಳ ಪರವಾಗಿ ಅಧಿವೇಶನದಲ್ಲಿ ಚರ್ಚೆ ನಡೆದರೆ ಸರ್ಕಾರ ಸೂಕ್ತ ಸಮಾಧಾನ ನೀಡಲೇ ಬೇಕಾಗುತ್ತದೆ. ಜಿಎಸ್‌ಟಿಯ ಕೇಂದ್ರದ ಪರಿಹಾರಕ್ಕೆ ಬದಲಾಗಿ ಸಾಲವನ್ನು ಪಡೆದುಕೊಳ್ಳಬೇಕೆಂಬ ಕೇಂದ್ರದ ಸಲಹೆ ಹಲವು ರಾಜ್ಯಗಳಿಗೆ ಸಮ್ಮತವಾಗಿಲ್ಲ. ಪರ್ಯಾಯ ಮಾರ್ಗ ಕಂಡುಕೊಳ್ಳಲು ಈ ಅಧಿವೇಶನ ಒಂದು ಅವಕಾಶ ಒದಗಿಸಬಹುದು. ಹಾಗೆಯೇ, ಕೋವಿಡ್ ಅವಧಿಯಲ್ಲಿಯೇ ಗಡಿಯಲ್ಲಿ ಚೀನಾದ ದುರಾಕ್ರಮಣ ನಡೆದಿದೆ. ಸರ್ಕಾರ ಚೀನಾವನ್ನು ಎದುರಿಸಲು ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ವಿವರಿಸಬೇಕಾಗುತ್ತದೆ. ಕೋವಿಡ್ ಆತಂಕದ ನಡುವೆ ಸದಸ್ಯರು ಸೂಕ್ತ ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಸಾಕಷ್ಟು ಅಂತರದಲ್ಲಿ ಸೀಟುಗಳ ವ್ಯವಸ್ಥೆ ಮಾಡಲಾಗಿದೆ. ಸದಸ್ಯರು ಭಾವೋದ್ವೇಗದ ಉದ್ರಿಕ್ತ ಪರಿಸ್ಥಿತಿ ನಿರ್ಮಾಣವಾಗದಂತೆ, ಸದನದ ಅಮೂಲ್ಯ ಸಮಯ ಹಾಳಾಗದಂತೆ ನೋಡಿಕೊಳ್ಳಬೇಕು. ಕಲಾಪವು ಅಮೂಲ್ಯವಾದುದರಿಂದ ಅದನ್ನು ವ್ಯರ್ಥಗೊಳಿಸದೆ ಫಲಪ್ರದವಾಗಿ ಬಳಸಿಕೊಳ್ಳುವ ಜವಾಬ್ದಾರಿ ಸಂಸದರ ಮೇಲೆ ಇದೆ.